ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
ಸಕಲೇಶಪುರ ಉಪ-ವಿಭಾಗ

ದಿನಾಂಕ/28.11.2018 29

ನಂ/ಸ.ಕಾ.ಇ./ಕ.ಇಂ/ಸೆಸ್ಕ್/ಸ.ಪುರ/ 2018-19 1933

ದಿನಾಂಕ 28.11.2018 ರಂದು ಸೆಸ್ಕ್, ಸಕಲೇಶಪುರ ಉಪ-ವಿಭಾಗ ಕಛೇರಿಯಲ್ಲಿ ಮಾನ್ಯ ಪ್ರಭಾರಿ ಅಧೀಕ್ಷಕ ಇಂಜನಿಯರ್(ವಿ) ಚಾ.ವಿ.ಸ.ನಿ.ನಿ. ಕಾರ್ಯ ಮತ್ತು ಪಾಲನಾ ವೃತ್ತ, ಹಾಸನ ರವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಕಾರ್ಯಕ್ರಮದಲ್ಲಿ ಸ್ವೀಕರಿಸಿದ ಅರ್ಜಿಗಳ ವಿವರ ಈ ಕೆಳಕಂಡಂತಿದೆ.

ಜನಸಂಪರ್ಕ ಸಭೆ ಕಾರ್ಯಕ್ರಮ ನಡೆದ ಸ್ಥಳ:- ಚಾ.ವಿ.ಸ.ನಿ.ನಿ., ಸಕಲೇಶಪುರ ಉಪ-ವಿಭಾಗ, ಸಕಲೇಶಪುರ

| ಕ್ರಮ ಸಂಖ್ಯೆ | ಅರ್ಜಿದಾರರ ಹೆಸರು ಮತ್ತು ವಿಳಾಸ | ಮೊಬೈಲ್ ನಂ | ಸಮಸ್ಯೆಯ ವಿವರ | ತೆಗೆದುಕೊಂಡ ಕ್ರಮ | ಷರಾ |
|---|---|---|---|---|---|
| 1 | ಶ್ರೀ ಹೇಮಂತ್, ರಾಮೇನಹಳ್ಳಿ ಗ್ರಾಮ. | 9844638030 | ಹೇಮಂತ್‌ರವರು ತಮ್ಮನೀರಾವರಿ ಪಂಪ್ ಸೆಟ್ ಸ್ಥಾವರಕ್ಕೆ ಹಾದು ಹೋಗಿರುವ ವಿದ್ಯುತ್. ಸಂಪರ್ಕ ನೀಡಲು ಪಕ್ಕದ ಗ್ರಾಹಕರು ಆಕ್ಷೇಪಣೆ ಮಾಡುತ್ತಿರುವ ಬಗ್ಗೆ. | ಈ ಬಗ್ಗೆ ಶಾಖಾಧಿಕಾರಿಗಳನ್ನು ವಿಚಾರಿಸಲಾಗಿ ಕಾಮಗಾರಿಗೆ ಸಂಬಂಧಿಸಿದಂತೆ ಈಗಾಗಲೇ ಕಂಬಗಳನ್ನು ಅಳವಡಿಸಿದ್ದು, ಸದರಿ ಆಕ್ಷೇಪಣೆ ಮಾಡುತ್ತಿರುವ ಬಳಕೆದಾರರ ಹಸುವು ವಿದ್ಯುತ್ ಅಪಘಾತದಿಂದ ಮೃತಪಟ್ಟಿದ್ದು, ಇಲಾಖೆಯಿಂದ ಸದರಿ ಅಪಘಾತದ ಪರಿಹಾರದ ಮೊತ್ತವನ್ನು ನೀಡುವವರೆಗೆ ವಿದ್ಯುತ್ ಸಂಪರ್ಕ ಮಾಡಬಾರದಾಗಿ ತಿಳಿಸಿರುತ್ತಾರೆ ಎಂದು ಶಾಖಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.<br>ಈ ಬಗ್ಗೆ ಚರ್ಚಿಸಿ ಸಂಬಂದಪಟ್ಟ ಗ್ರಾಹಕರೊಂದಿಗೆ ಪರಿಹಾರ ಮೊತ್ತದ ಹಣವನ್ನು ನೀಡುವುದಾಗಿ ಮನವೊಲಿಸಿ ವಿದ್ಯುತ್ ಸಂಪರ್ಕವನ್ನು ನೀಡಲು ಕ್ರಮ ವಹಿಸುವಂತೆ ಸಹಾಯಕ ಕಾರ್ಯಪಾಲಕ ಇಂಜನಿಯರ್(ವಿ) ಮತ್ತು ಸಹಾಯಕ ಇಂಜನಿಯರ್(ವಿ) ಸಕಲೇಶಪುರ ಶಾಖೆ ರವರಿಗೆ ತಿಳಿಸಿದರು. | |
| 2 | ಶ್ರೀ ಮಲ್ಲೇಶ್, ಹೆಬ್ಬಸಾಲೆ | 9448144158 | ವಿದ್ಯುತ್ ವೋಲ್ಟೇಜ್ ಸಮಸ್ಯೆ ಇದ್ದು ಈ ಸಂಬಂಧ ಪರಿವರ್ತಕದ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿ ಬಗ್ಗೆ | IPDS ಯೋಜನೆಯಡಿಯಲ್ಲಿ ಈ ಕಾಮಗಾರಿಯನ್ನು ತೆಗೆದುಕೊಂಡಿದ್ದು, ಇನ್ನು ವಾರದೊಳಗಾಗಿ ಹಾಲಿ ಇರುವ 25 ಕೆ.ವಿ.ಎ. ಪರಿವರ್ತಕವನ್ನು 63 ಕೆ.ವಿ.ಎ. ಗೆ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿಯನ್ನು ಪೂರ್ಣಗೊಳಿಸಿ ಕೊಡುವುದಾಗಿ ಶಾಖಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು. | |
| 3 | ಪ್ರತಾಪ್, ಹಳ್ಳಿಯೂರು. | 9343958607 | ಕುಡಿಯುವ ನೀರಿನ ಪರಿವರ್ತಕವು ವಿಫಲವಾಗಿ 2 ತಿಂಗಳಾಗಿದ್ದು, ಈವರೆವಿಗೂ ಬದಲಾಯಿಸದೆ ಇರುವ ಬಗ್ಗೆ. | ಈ ಬಗ್ಗೆ ಈಗಾಗಲೇ ಕ್ರಮ ವಹಿಸಲಾಗಿದ್ದು, ಇಂಡೆಂಟ್ ಹಾಕಲಾಗಿರುತ್ತದೆ. ಹಳ್ಳಿಯೂರು ಗ್ರಾಮದ ಕುಡಿಯುವ ನೀರಿನ ಪರಿವರ್ತಕವನ್ನು ಬದಲಾವಣೆ ಮಾಡಿಕೊಡಲಾಗುವುದು ಎಂದು ಶಾಖಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು. | |

| | | | | | |
|---|---|---|---|---|---|
| 4 | ಶ್ರೀ ಧರ್ಮರಾಜ್, ಹೊಂಗಡಹಳ್ಳಿ | 9448654487 | ಕಡಿಮೆ ವೋಲ್ಟೇಜ್ ಸಮಸ್ಯೆ ಇದ್ದು, ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಬೇಕು ಎಂದು ಕೋರಿದರು. | ಈ ಬಗ್ಗೆ ಚರ್ಚಿಸಲಾಗಿ ಹೊಂಗಡಹಳ್ಳಿ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆ ಇದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವ ಸಂಬಂಧ ಈಗಾಗಲೇ ಅಂದಾಜು ಪಟ್ಟಿ ತಯಾರಿಸಿ ಕಾರ್ಯಾದೇಶ ಕೂಡ ಆಗಿರುತ್ತದೆ. ಉಗ್ರಾಣದಲ್ಲಿ ಕೆಲವು ಸಾಮಾಗ್ರಿಗಳ ಲಭ್ಯತೆಯ ಅನುಸಾರವಾಗಿ ಕಾಮಗಾರಿಯನ್ನು ಶೀಘ್ರವಾಗಿ ನಿರ್ವಹಿಸಿಕೊಡಲಾಗುವುದು ಎಂದು ಕಾರ್ಯಪಾಲಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ತಿಳಿಸಿದರು. | |
| 5 | ಶ್ರೀ ಜಗದೀಶ್, ಯಸಳೂರು | 9449952836 | ಯಸಳೂರು ಶಾಖಾ ಕಛೇರಿಯ ಕಟ್ಟಡಕ್ಕಾಗಿ ಪಂಚಾಯಿತಿಯಿಂದ ಅರ್ಧ ಎಕರೆ ಜಾಗ ನೀಡಿದ್ದು, ಸದರಿ ಜಾಗಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಕಛೇರಿ ಮತ್ತು ಉಪವಿಭಾಗಾಧಿಕಾರಿಗಳ ಕಛೇರಿಯಿಂದ ಅನುಮೋದನೆ ಆಗಬೇಕಾಗಿದ್ದು ಈ ಬಗ್ಗೆ ಇಲಾಖೆಯಿಂದ ಪತ್ರ ವ್ಯವಹಾರ ಮಾಡುವ ಬಗ್ಗೆ | ಈ ಬಗ್ಗೆ ತಹಸೀಲ್ದಾರ್, ಮತ್ತು ಉಪ-ವಿಭಾಗಾಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡುವಂತೆ ಮತ್ತು ಈ ಬಗ್ಗೆ ಖುದ್ದಾಗಿ ತಾಲ್ಲೂಕು ಕಛೇರಿಗೆ ಭೇಟಿ ಮಾಡಿ ಈ ಬಗ್ಗೆ ಪರಿಶೀಲನೆ ಮಾಡಲು ತಿಳಿಸಲಾಯಿತು. | |

28/11/18.

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ
ಚಾ.ವಿ.ಸ.ನಿ.ನಿ., ಸಕಲೇಶಪುರ